1. ಗ್ರಾಮ ಅರಣ್ಯ ಸಮಿತಿ ಸದಸ್ಯರು ತಮಗೆ ಅಗತ್ಯವಾದ ಮೇವು, ರೆಂಬೆ ಕೊಂಬೆಗಳೂ ಮತ್ತು ಚೌಬೀನೇತರ ಅರಣ್ಯ ಉತ್ಪನ್ನಗಳನ್ನು ಉಚಿತವಾಗಿ ಪಡೆಯಲು ಅರ್ಹರಾಗಿರುತ್ತಾರೆ.

2. ಕಿರು ಅರಣ್ಯ ಉತ್ಪನ್ನಗಳಿಗೆ ಸಂಬಂಧಿಸಿದಂತೆ ಶೇಕಡ 90 ರಷ್ಟು ಪಾಲನ್ನು ಗ್ರಾಮ ಅರಣ್ಯ ಸಮಿತಿಗೆ ನೀಡಲಾಗುತ್ತಿದೆ.

3. ಗ್ರಾಮ ಅರಣ್ಯ ಸಮಿತಿ ನೆರವಿನಿಂದ ಸೃಜಿಸಲಾದ ಆಸ್ತಿಗಳಿಂದ ಬರುವ ಇತರೆ ಅರಣ್ಯ ಉತ್ಪನ್ನಗಳಲ್ಲಿ ಗ್ರಾಮ ಅಸರಣ್ಯ ಸಮಿತಿಗೆ ಶೇಕಡ 75 ರಷ್ಟು ಪಾಲನ್ನು ನೀಡಲಾಗುತ್ತಿದೆ.

4. ಗ್ರಾಮ ಅರಣ್ಯ ಸಮಿತಿಯ ಕಾರ್ಯಕಾರಿ ಸಮಿತಿಯಲ್ಲಿ ಮಹಿಳೆಯರ ಸಂಖ್ಯೆಯನ್ನು 2 ರಿಂದ 5 ಕ್ಕೆ ಹೆಚ್ಚಿಸಲಾಗಿದೆ.

5. ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆ ಕಾರ್ಯಯೋಜನೆಯ ಉದ್ದೇಶ ಮತ್ತು ಲಾಭಗಳ ಬಗ್ಗೆ ಗ್ರಾಮ ಅರಣ್ಯ ಸಮಿತಿ ಸದಸ್ಯರು, ಸರ್ಕಾರೇತರ ಸಂಸ್ಥೆಯ ಪ್ರತಿನಿಧಿಗಳು ಮತ್ತು ಇಲಾಖಾ ಸಿಬ್ಬಂದಿಗೆ ತರಬೇತಿ ಶಿಬಿರಗಳನ್ನು ಹಾಗೂ ಕಾರ್ಯಾಗಾರಗಳನ್ನು ಏರ್ಪಡಿಸಲಾಗುತ್ತಿದೆ.

6. ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆ ಕಾರ್ಯಕ್ರಮಗಳೂ ಯಶಸ್ವಿಯಾಗಲು ಸರ್ಕಾರೇತರ ಸಂಸ್ಥೆಗಳ ಸೇವೆಯನ್ನು ಬಳಸಿಕೊಳ್ಳಲಾಗುತ್ತಿದೆ.

7. ಗ್ರಾಮ ಅರಣ್ಯ ಸಮಿತಿಗಳಿಗೆ ಇಲಾಖಾವತಿಯಿಂದ ತಲಾ ರೂ. 35,000.00 ದಂತೆ ಪ್ರಾರಂಭಿಕ ಹಂತದ ಚಟುವಟಿಕೆಗಳನ್ನು ಪ್ರಾರಂಭಿಸಲು ಹಣದ ನೆರವು ನೀಡಿ ಆದಾಯ ವೃದ್ಧಿಸುವ ಹಲವಾರು ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಕಾರ್ಮಿಕ ಕಲ್ಯಾಣಕ್ಕಾಗಿ ಸರ್ಕಾರ ಜಾರಿಗೆ ತಂದಿರುವ ವಿವಿಧ ಕಾರ್ಯಕ್ರಮಗಳು

4301(4972) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕಾರ್ಮಿಕರ ಕಲ್ಯಾಣಕ್ಕಾಗಿ ಸರ್ಕಾರ ಜಾರಿಗೆ ತಂದಿರುವ ವಿವಿಧ ಕಾರ್ಯಕ್ರಮಗಳು ಯಾವುವು ;

ಆ) ಕಾರ್ಖಾನೆಗಳ ಅನಧಿಕೃತ ಮುಚ್ಚುವಿಕೆ ಮತ್ತು ಲಾಕ್‌ಔಟ್ ಪ್ರಕರಣ ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

ಇ) ಮೈಸೂರು ತಾಲ್ಲೂಕಿನಲ್ಲಿ ಅನಧಿಕೃತವಾಗಿ ಲಾಕ್‌ಔಟ್ ಘೋಷಿಸಿರುವ ಕಾರ್ಖಾನೆಗಳು ಯಾವುವು : ಇದರಿಂದ ತೊಂದರೆಗೆ ಒಳಗಾದ ನೌಕರರು ಎಷ್ಟು ;

ಈ) ಈ ಕಾರ್ಖಾನೆಗಳ ಲಾಕ್‌ಔಟ್ ತೆರವಿಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ;

ಉ) ಸರ್ಕಾರದ ಪ್ರಯತ್ನಕ್ಕೆ ಓಗೊಡದ ಮಾಲೀಕರ ವಿರುದ್ಧ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಖಮರುಲ್ಲ ಇಸ್ಲಾಂ (ಕಾರ್ಮಿಕ ಸಚಿವರು) :

ಅ) ಸರ್ಕಾರವು ವಿವಿಧ ಕಾರ್ಮಿಕ ಕಾಯ್ದೆಗಳ ಅಡಿಯಲ್ಲಿ ಕಾರ್ಮಿಕರ ಕಲ್ಯಾಣಕ್ಕಾಗಿ ಉಪಧನ ಪಾವತಿ ಕಾಯ್ದೆ, ಬೋನಸ್ ಕಾಯ್ದೆ, ಹೆರಿಗೆ ಭತ್ಯೆ ಕಾಯ್ದೆ, ಕಾರ್ಮಿಕ ಪರಿಹಾರ ಕಾಯ್ದೆ, ಇ.ಎಸ್.ಐ ಕಾಯ್ದೆ ಮತ್ತು ಪಿ.ಎಫ್ ಕಾಯ್ದೆ ಸೌಲಭ್ಯಗಳನ್ನು ಕಾರ್ಖಾನೆಯ ಕಾರ್ಮಿಕರಿಗೆ ಒದಗಿಸಲು ಪ್ರಯತ್ನಿಸುತ್ತಿದೆ ;

ಆ) ಕೈಗಾರಿಕಾ ವಿವಾದ ಕಾಯ್ದೆ 1947ರ ಕಲಂ 23ರಡಿಯಲ್ಲಿ ಬೀಗಮುದ್ರೆ ಮಾಡದಂತೆ ಸಾಮಾನ್ಯ ನಿಷೇಧವನ್ನು ಹೇರಲಾಗಿದೆ. ಈ ಕಲಂನ್ನು ಉಲ್ಲಂಘನೆ ಮಾಡಿ ಬೀಗಮುದ್ರೆ ಮಾಡಿದಲ್ಲಿ, ಅದು ಸೆಕ್ಷನ್ 24ರಡಿಯಲ್ಲಿ ಕಾನೂನುಬಾಹಿರವಾಗಿರುತ್ತದೆ.

ಯಾವುದೇ ಕೈಗಾರಿಕಾ ಕಾರ್ಖಾನೆಗಳಲ್ಲಿ 100ಕ್ಕಿಂತ ಮಿಗಿಲಾಗಿ ಕಾರ್ಮಿಕರಿದ್ದಲ್ಲಿ, ಆ ಸಂಸ್ಥೆಯನ್ನು ಮುಚ್ಚಲು ಕೈಗಾರಿಕಾ ವಿವಾದ ಕಾಯ್ದೆ, 1947ರ ಕಲಂ 25(O)ರ ಅಡಿಯಲ್ಲಿ ಸರ್ಕಾರದ ಅನುಮತಿ ಪಡೆಯಬೇಕಾಗುತ್ತದೆ. ಈ ಕಲಂನ್ನು ಉಲ್ಲಂಘಿಸಿ ಕಾರ್ಖಾನೆಯನ್ನು ಮುಚ್ಚಿದಲ್ಲಿ ಕಲಂ 25(R) ರಡಿಯಲ್ಲಿ ದಂಡಕ್ಕೆ ಒಳಪಡುತ್ತಾರೆ.

ಸರ್ಕಾರಕ್ಕೆ ಅನಧಿಕೃತ ಮುಚ್ಚುವಿಕೆ ಮತ್ತು ಬೀಗಮುದ್ರೆ ಕಂಡು ಬಂದಲ್ಲಿ ಆ ಕಾರ್ಖಾನೆಗಳ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸುತ್ತದೆ.

ಇ) ಮೈಸೂರು ತಾಲ್ಲೂಕಿನಲ್ಲಿ ಈ ಕೆಳಕಾಣಿಸಿದ ನಾಲ್ಕು ಕಾರ್ಖಾನೆಗಳನ್ನು ಅನಧಿಕೃತವಾಗಿ ಲಾಕ್‌ಔಟ್ ಘೋಷಿಸಿದ್ದು, ಇದರಿಂದಾಗಿ ಒಟ್ಟು 314 ನೌಕರರು ತೊಂದರೆಗೆ ಒಳಗಾಗಿರುತ್ತಾರೆ.

1) ವಿಷ್ಣು ಫೋರ್ಜ್, ಮೈಸೂರು

2) ಫ್ಯೂಜಿ ಅಂಬ್ರೆಲಾ, ಮೈಸೂರು

3) ಮೈಸೂರು ಪ್ರಿಸಿಷನ್ ಇಂಜಿನಿಯರಿಂಗ್, ಯಾದವಗಿರಿ, ಮೈಸೂರು

4) ಮೈಸೂರು ಪ್ಯಾನಲ್ ಅಂಡ್ ಬೋರ್ಡ್, ಪಾಂಡವಪುರ, ಮೈಸೂರು

ಈ) 1) ವಿಷ್ಣು ಫೋರ್ಜ್, ಮೈಸೂರು ಈ ಪ್ರಕರಣದಲ್ಲಿ ಸಂಧಾನಾಧಿಕಾರಿಗಳ ಮುಂದೆ ಒಪ್ಪಂದವೇರ್ಪಟ್ಟು, ಬೀಗ ಮುದ್ರೆಯನ್ನು ತೆರವುಗೊಳಿಸಲಾಗಿದೆ. ಹಾಗೂ ಕಾರ್ಮಿಕರಿಗೆ ರೂ. 61.7 ಲಕ್ಷ ಪರಿಹಾರವನ್ನು ಪಾವತಿಸಲಾಗಿದೆ.

2) ಫ್ಯೂಜಿ ಅಂಬ್ರೆಲಾ ಈ ಪ್ರಕರಣದಲ್ಲಿ ಕೈಗಾರಿಕಾ ವಿವಾದ ಕಾಯ್ದೆ 1947ರ ಕಲಂ 10(3) ರಡಿಯಲ್ಲಿ ಮುಂದುವರೆದ ಬೀಗಮುದ್ರೆ ನಿಷೇಧಿಸಿ, ಸರ್ಕಾರ ಆದೇಶ ಹೊರಡಿಸಿರುತ್ತದೆ.

3) ಮೈಸೂರು ಪ್ರಿಸಿಷನ್ ಇಂಜಿನಿಯರಿಂಗ್, ಯಾದವಗಿರಿ, ಮೈಸೂರು ಈ ಪ್ರಕರಣದಲ್ಲಿ ಸಂಧಾನದ ಮೂಲಕ ವಿವಾದ ಇತ್ಯರ್ಥಗೊಂಡು ಕಾರ್ಮಿಕರಿಗೆ ರೂ. 3,69,371/– ಗಳ ಪರಿಹಾರವನ್ನು ಪಾವತಿ ಮಾಡಲಾಗಿರುತ್ತದೆ. ಹಾಗೂ ಕಾರ್ಖಾನೆಯು ದಿನಾಂಕ: 1–2–2002 ರಿಂದ ಪುನರಾರಂಭಗೊಂಡಿರುತ್ತದೆ.

4) ಮೈಸೂರು ಪ್ಯಾನಲ್ ಬೋರ್ಡ್, ಪಾಂಡವಪುರ, ಮೈಸೂರು ಈ ವಿವಾದವನ್ನು ಸಂಧಾನಕ್ಕೆ ತೆಗೆದುಕೊಂಡು, ವಿಫಲಗೊಂಡ ಪರಿಣಾಮವಾಗಿ ನ್ಯಾಯ ನಿರ್ಣಯಕ್ಕಾಗಿ ಸರ್ಕಾರದ ಆದೇಶ ಸಂ: ಕಾಇ 974 ಕಾಕೈವಿ 2002 ದಿನಾಂಕ: 7–2–2002ರಲ್ಲಿ ಕಾರ್ಮಿಕ ನ್ಯಾಯಾಲಯಕ್ಕೆ ಒಪ್ಪಿಸಲಾಗಿದೆ.

ಉ) ಸರ್ಕಾರದ ಆದೇಶದ ಮೇರೆಗೆ ಕಾರ್ಖಾನೆಯ ಬೀಗಮುದ್ರೆಯನ್ನು ತೆರವುಗೊಳಿಸದಿದ್ದಲ್ಲಿ, ಅಂತಹ ಮಾಲೀಕರ ಮೇಲೆ ಕಾನೂನಾತ್ಮಕ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಬೀಳು ಭೂಮಿ ರೆಸ್ಟೋರೇಶನ್

4302(4973) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?